# ಹೂವಿನ ತೊಟ್ಟಿಲು

■ ಚಿತ್ರ–ಬರಹ:
**ದಿನೇಶ್ ಪಟವರ್ಧನ್**

ಮಲೆನಾಡಿನ ಬೆಟ್ಟಗುಡ್ಡಗಳಲ್ಲಿ ಸುರಿದ ಮಳೆ ಹೊಸ ಜೀವಕಳೆ ಮೂಡಿಸಿದೆ. ಇದಕ್ಕೆ ಪುಟ ಇಟ್ಟಂತೆ ಅಲ್ಲಲ್ಲಿ ಅರಳಿ ನಿಂತ ಬೇಲಿ ಹೂಗಳು ಪ್ರಕೃತಿಯ ಸೊಬಗನ್ನು ಇಮ್ಮಡಿಗೊಳಿಸಿವೆ.

ವೈವಿಧ್ಯ ಬಣ್ಣ, ಆಕಾರ, ಸುವಾಸನೆ , ಚೆಲುವಿನ ಮೂಲಕ ಈ ಪುಷ್ಪಗಳು ಗಮನ ಸೆಳೆಯುತ್ತವೆ. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವ ಸೂಜಿಗಲ್ಲಿನ ಆಕರ್ಷಣೆ. ಇದರಲ್ಲಿ ಹಲವು ಔಷಧೀಯ ಗುಣಗಳನ್ನೂ ಹೊಂದಿರುತ್ತವೆ.

ವರ್ಣನೆಯ ಸೀಮೆ ದಾಟಿದ ಆಸ್ತಿ ಈ ಹೂಗಳು. ಗಿಡ, ಮರ, ಬಳ್ಳಿಗಳಲ್ಲಿ ಕಾಣಸಿಗುವ ಇವುಗಳಲ್ಲಿ ಕೆಲವು ತಿಳಿ ಬಣ್ಣ ಹೊಂದಿದ್ದರೆ ಮತ್ತೆ ಕೆಲವು ಕಡುಬಣ್ಣ ಹೊತ್ತಿರುತ್ತವೆ. ಆಕಾರದಲ್ಲೂ ಹಾಗೆ. ಎಲ್ಲವೂ ಕಂಪನ್ನು ಸೂಸುವುದಿಲ್ಲ.

ಮಾರುಕಟ್ಟೆಗೆ ಪ್ರವೇಶಿಸದೆ, ಇನ್ನೊಬ್ಬರ ಮುಡಿ ಏರದೆ, ಗುಡಿ ಸೇರದೆ ತಮ್ಮಷ್ಟಕ್ಕೆ ಕಾಲಕಾಲಕ್ಕೆ ಅರಳಿ ಕಂಪ ಸೂಸಿ ಮರೆಯಾಗುವ ಈ ಮೋಹಕ ಮಂದಾಕಿನಿಯರು ನಮ್ಮ ಪ್ರಕೃತಿಯ ವಿಶಿಷ್ಟ ಆಸ್ತಿ. ಇವುಗಳ ವೈಜ್ಞಾನಿಕ ಹೆಸರನ್ನು ಬೆನ್ನು ಹತ್ತಿ ಹೋಗುವವರೂ ವಿರಳ. ಆಡು ಭಾಷೆಯಲ್ಲಿ ಕರೆದದ್ದೇ ಇವುಗಳ ಹೆಸರು. ಇವುಗಳನ್ನು ಯಾರೂ ಪ್ರೀತಿಸದಿದ್ದರೂ ದುಂಬಿಗಳಂತೂ ದೂರ ಮಾಡುವುದಿಲ್ಲ.





